**Sahitya School**

Shidlaghatta Road, Near Shirusti Hospital, H Cross.

# ಮಕ್ಕಳೊಂದಿಗೆ ಕುಳಿತು ಓದುವುದು.



- **ಓದುವುದನ್ನು ಆದ್ಯತೆಯನ್ನಾಗಿ ಮಾಡಿ.** ಪುಸ್ತಕ ಓದುವುದು ಬಹಳ ಮುಖ್ಯ. ಯಾವಾಗಲೂ ಒಂದು ನಿಗದಿತ ಸಮಯದಲ್ಲಿ ಓದುವುದು ತುಂಬಾ ಮುಖ್ಯ ಎಂದು ನಿಮ್ಮ ಮಗುವಿಗೆ ತಿಳಿಸಿ. ಪ್ರತಿದಿನ ಕುಳಿತು ಓದಲು ಒಂದು ಸಮಯ ಮತ್ತು ಸ್ಥಳವನ್ನು ನಿಗದಿ ಮಾಡಿ.
- **ನಿಮ್ಮ ಮಗುವಿಗೆ ಓದಿ.** ನಿಮ್ಮ ಮಗುವಿಗೆ ಪ್ರತಿದಿನ ಪುಸ್ತಕ ಓದುವುದನ್ನು ಅಭ್ಯಾಸ ಮಾಡಿಕೊಳ್ಳಿ. ಇದು ಕಲಿಕೆಯ ಮೇಲಿನ ಪ್ರೀತಿಯನ್ನು ಬೆಳೆಸಲು ಅತ್ಯಂತ ಉತ್ತಮ ಮಾರ್ಗ.
- **ನಿಮ್ಮ ಮಗು ಓದುವಾಗ ಗಟ್ಟಿಯಾಗಿ ಓದಲು ಹೇಳಿ.** ಮಗುವಿನ ಉಚ್ಚಾರಣೆಯನ್ನು ಕೇಳುವುದರಿಂದ ತಪ್ಪಾದಾಗ ಸರಿಪಡಿಸಬಹುದು.
- **ಮಕ್ಕಳ ಪುಸ್ತಕಗಳು ಮತ್ತು ನಿಯತಕಾಲಿಕೆಗಳು ಮಕ್ಕಳಿಗೆ ಯಾವಾಗಲೂ ಸುಲಭವಾಗಿ ಸಿಗುವಂತೆ ನೋಡಿಕೊಳ್ಳಿ.** ಪುಸ್ತಕಗಳು ಅಡುಗೆಮನೆ, ಮಲಗುವ ರೂಂ ಮಾತ್ರವಲ್ಲದೆ ಲಿವಿಂಗ್ ರೂಮ್‌ನಲ್ಲೂ ಸಿಗುವಂತೆ ಇರಿಸಿ. ಮಕ್ಕಳು ಅವುಗಳನ್ನು ಸದಾ ಓದುವಂತೆ ಉತ್ತೇಜಿಸಿ.
- **ಯಾವಾಗಲೂ ಗ್ರಂಥಾಲಯಕ್ಕೆ ಹೋಗುವುದನ್ನು ರೂಢಿಸಿಕೊಳ್ಳಿ.** ನಿಮ್ಮ ಮಕ್ಕಳು ಅವರಿಷ್ಟದ ಪುಸ್ತಕಗಳನ್ನು ಹುಡುಕಿ ತೆಗೆದುಕೊಳ್ಳಲು ಅವಕಾಶ ಮಾಡಿಕೊಡಿ.
- **ಪುಸ್ತಕ ಓದುವುದರಲ್ಲಿ ನೀವೇ ಮಾದರಿಯಾಗಿರಿ.** ನೀವು ಪುಸ್ತಕ ಓದುವುದನ್ನು, ಪುಸ್ತಕದ ಬಗ್ಗೆ ಮಾತನಾಡುವುದನ್ನು ನಿಮ್ಮ ಮಕ್ಕಳು ಕೇಳಿಸಿಕೊಳ್ಳಲಿ.

**Where Fun Meets Learning**